# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 467 |
| ಸದಸ್ಯರ ಹೆಸರು | : | ಶ್ರೀ ಆರ್.ಬಿ. ತಿಮ್ಮಾಪೂರ |
| ಉತ್ತರಿಸುವ ದಿನಾಂಕ | : | 16-12-2021 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯಾದ್ಯಂತ ಕಳೆದ ಎರಡು ದಶಕದಿಂದ ಖಾಲಿ ಉಳಿದಿರುವ ಬ್ಯಾಕ್‌ಲಾಗ್ ಹುದ್ದೆಗಳ ಸಂಖ್ಯೆ ಎಷ್ಟು; ಯಾವ ಯಾವ ಇಲಾಖೆಗಳಲ್ಲಿ ಬ್ಯಾಕ್‌ಲಾಗ್ ಹುದ್ದೆಗಳನ್ನು ಗುರುತಿಸಲಾಗಿದೆ; | ಸರ್ಕಾರದ ವಿವಿಧ ಇಲಾಖೆ, ನಿಗಮ, ಮಂಡಳಿಗಳು, ವಿಶ್ವವಿದ್ಯಾಲಯಗಳು, ಸಹಕಾರಿ ಸಂಸ್ಥೆಗಳು ಮತ್ತು ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 13 ಎಸ್‌ಬಿಸಿ 2001 ಬೆಂಗಳೂರು, ದಿನಾಂಕ: 21.11.2001 ಮತ್ತು ಡಿಪಿಎಆರ್ 13 ಎಸ್‌ಬಿಸಿ 2001 ಬೆಂಗಳೂರು, ದಿನಾಂಕ: 01.06.2002 ರನ್ವಯ 2001 ರಲ್ಲಿ ಪರಿಶಿಷ್ಟ ಜಾತಿಯ 14624 ಮತ್ತು ಪರಿಶಿಷ್ಟ ಪಂಗಡದ 4491 ಒಟ್ಟು 19115 ಹುದ್ದೆಗಳನ್ನು ಗುರುತಿಸಲಾಗಿತ್ತು. ಅವುಗಳಲ್ಲಿ ಇಲ್ಲಿಯವರೆಗೆ ಪರಿಶಿಷ್ಟ ಜಾತಿ – 13185 ಮತ್ತು ಪರಿಶಿಷ್ಟ ಪಂಗಡ – 3773 ಒಟ್ಟು 16958 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಕೆಲವು ಸಂಸ್ಥೆಗಳು ಮುಚ್ಚಲ್ಪಟ್ಟ ಹಾಗೂ ಆರ್ಥಿಕ ಸಂಕಷ್ಟದ ಕಾರಣಗಳಿಂದ 165 ಹುದ್ದೆಗಳಿಗೆ ಭರ್ತಿಯಿಂದ ವಿನಾಯಿತಿ ನೀಡಲಾಗಿದೆ.<br><br>ಪ್ರಸ್ತುತ 20 ಇಲಾಖೆಗಳಲ್ಲಿ ಪರಿಶಿಷ್ಟ ಜಾತಿಯ 1630 ಮತ್ತು ಪರಿಶಿಷ್ಟ ಪಂಗಡದ 802 ಒಟ್ಟು 2432 ಹುದ್ದೆಗಳು ಭರ್ತಿ ಮಾಡಲು ಬಾಕಿ ಇರುತ್ತದೆ. ಅವುಗಳ ಸಂಕ್ಷಿಪ್ತ ವಿವರ ಈ ಕೆಳಕಂಡಂತಿದೆ. |

**ಗುರುತಿಸಿರುವ, ಭರ್ತಿ ಮಾಡಿರುವ ಮತ್ತು ಭರ್ತಿ ಮಾಡಲು ಬಾಕಿ ಇರುವ ಬ್ಯಾಕ್‌ಲಾಗ್ ಹುದ್ದೆಗಳ ವಿವರ**

| ಕ್ರ. ಸಂ | ವಿಷಯ | ಪ.ಜಾತಿ | ಪ.ಪಂಗಡ | ಒಟ್ಟು |
|---|---|---|---|---|
| 1 | ಗುರುತಿಸಲಾದ ಒಟ್ಟು ಹುದ್ದೆಗಳು | 14624 | 4491 | 19115 |
| 2 | ಈಗಾಗಲೇ ಭರ್ತಿ ಮಾಡಲಾಗಿರುವ ಹುದ್ದೆಗಳು | 13185 | 3773 | 16958 |
| 3 | ಭರ್ತಿಯಿಂದ ವಿನಾಯಿತಿ ನೀಡಲಾದ ಹುದ್ದೆಗಳು | 117 | 48 | 165 |
| 4 | ಭರ್ತಿ ಮಾಡಲು ಬಾಕಿ ಇರುವ ಹುದ್ದೆಗಳು | 1322 | 670 | 1992 |

2001 ನಂತರ ಇಲ್ಲಿಯವರೆಗೆ ಗುರುತಿಸಲಾಗಿರುವ ಬ್ಯಾಕ್‌ಲಾಗ್ ಹುದ್ದೆಗಳ ವಿವರ ಈ ಕೆಳಕಂಡಂತಿದೆ.

**ಗುರುತಿಸಿರುವ, ಭರ್ತಿ ಮಾಡಿರುವ ಮತ್ತು ಭರ್ತಿ ಮಾಡಲು ಬಾಕಿ ಇರುವ ಬ್ಯಾಕ್‌ಲಾಗ್ ಹುದ್ದೆಗಳ ವಿವರ**

| ಕ್ರ. ಸಂ | ವಿಷಯ | ಪ.ಜಾತಿ | ಪ.ಪಂಗಡ | ಒಟ್ಟು |
|---|---|---|---|---|
| 1 | ಗುರುತಿಸಲಾದ ಒಟ್ಟು ಹುದ್ದೆಗಳು | 1789 | 472 | 2261 |
| 2 | ಈಗಾಗಲೇ ಭರ್ತಿ ಮಾಡಲಾಗಿರುವ ಹುದ್ದೆಗಳು | 1481 | 340 | 1821 |
| 3 | ಭರ್ತಿ ಮಾಡಲು ಬಾಕಿ ಇರುವ ಹುದ್ದೆಗಳು | 308 | 132 | 440 |

**"ಒಟ್ಟಾರೆಯಾಗಿ ಶೇ.89% ಹುದ್ದೆಗಳು ಭರ್ತಿಯಾಗಿರುತ್ತವೆ"** ಪ್ರಸ್ತುತ 20

| | | |
|---|---|---|
| | | ಇಲಾಖೆಗಳಲ್ಲಿ 2001 ರವರೆಗೆ ಗುರುತಿಸಿರುವ ಬ್ಯಾಕ್‌ಲಾಗ್ ಹುದ್ದೆಗಳಲ್ಲಿ ಮತ್ತು 2001 ರ ನಂತರ ಗುರುತಿಸಿರುವ ಹುದ್ದೆಗಳಲ್ಲಿ ಪ್ರಸ್ತುತ ಪರಿಶಿಷ್ಟ ಜಾತಿ - 1630 ಮತ್ತು ಪರಿಶಿಷ್ಟ ಪಂಗಡ - 802 ಒಟ್ಟು 2432 ಹುದ್ದೆಗಳು ಭರ್ತಿ ಮಾಡಲು ಬಾಕಿ ಇರುತ್ತದೆ. **ಇಲಾಖಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.** |
| ಆ) | ಈ ಬ್ಯಾಕ್‌ಲಾಗ್ ಹುದ್ದೆಗಳನ್ನು ಒಂದೇ ಬಾರಿಗೆ ಭರ್ತಿ ಮಾಡಲು ಸರ್ಕಾರ ಚಿಂತನೆ ನಡೆಸಿದೆಯೇ? | ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲು ಉಸ್ತುವಾರಿಗಾಗಿ ಸಮಾಜ ಕಲ್ಯಾಣ ಸಚಿವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟ ಉಪಸಮಿತಿ ಸಭೆಯು ದಿನಾಂಕ: 17.01.2020 ರಂದು ನಡೆದಿದ್ದು, ಸದರಿ ಸಭೆಯಲ್ಲಿ ವಿವಿಧ ಇಲಾಖೆಗಳ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಮುಖ್ಯ ಕಾರ್ಯದರ್ಶಿ/ ಕಾರ್ಯದರ್ಶಿಗಳಿಗೆ ಬ್ಯಾಕ್‌ಲಾಗ್ ಹುದ್ದೆಗಳನ್ನು ಪ್ರಥಮ ಆದ್ಯತೆಯ ಮೇರೆಗೆ ಭರ್ತಿ ಮಾಡುವಂತೆ ನಿರ್ದೇಶನ ನೀಡಲಾಗಿದೆ.<br><br>ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಇವರಿಂದ ಬ್ಯಾಕ್‌ಲಾಗ್ ಹುದ್ದೆಗಳು ಬಾಕಿ ಇರುವ ಸಂಬಂಧಪಟ್ಟ ಇಲಾಖೆಗಳ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿ, ಕಾರ್ಯದರ್ಶಿ, ಆಯುಕ್ತರು, ನಿರ್ದೇಶಕರು, ವ್ಯವಸ್ಥಾಪಕ ನಿರ್ದೇಶಕರು, ನಿಬಂಧಕರು, ಕುಲಸಚಿವರುಗಳಿಗೆ ದಿನಾಂಕ:10.02.2020, 12.02.2020, 26.05.2020, 25.06.2020, 18.12.2020, 23.04.2021 25.08.2021 ಮತ್ತು 11.10.2021ರ ಪತ್ರಗಳಲ್ಲಿ ಬ್ಯಾಕ್‌ಲಾಗ್ ಹುದ್ದೆಗಳನ್ನು ಪ್ರಥಮ ಆದ್ಯತೆಯ ಮೇರೆಗೆ ಭರ್ತಿ ಮಾಡುವಂತೆ ಕೋರಲಾಗಿರುತ್ತದೆ.<br><br>ಪ್ರತಿವಾರ ನಡೆಯುವ ಕರ್ನಾಟಕ ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ ಸಭೆಯಲ್ಲಿ ಎಲ್ಲಾ ಇಲಾಖೆಗಳಿಂದ ಬ್ಯಾಕ್‌ಲಾಗ್ ಹುದ್ದೆಗಳ ಬಗ್ಗೆ ಪರಿಶೀಲನೆ ನಡೆಸಿ ಪ್ರಥಮ ಆದ್ಯತೆಯ ಮೇರೆಗೆ ಭರ್ತಿ ಮಾಡುವಂತೆ ಸೂಚನೆಯನ್ನು ನೀಡಲಾಗಿದೆ. |

ಸಕಇ 116 ಎಸ್‌ಟಿಸಿ 2021

**(ಕೋಟ ಶ್ರೀನಿವಾಸ ಪೂಜಾರಿ)**
ಸಮಾಜ ಕಲ್ಯಾಣ ಮತ್ತು ಹಿಂದುಳಿದ
ವರ್ಗಗಳ ಕಲ್ಯಾಣ ಸಚಿವರು

ಅನುಬಂಧ -1

ಸರ್ಕಾರದ ವಿವಿಧ ಇಲಾಖೆಗಳು/ ನಿಗಮಗಳು/ಮಂಡಳಿಗಳು/ವಿಶ್ವವಿದ್ಯಾಲಯಗಳು/ಸಹಕಾರ ಸಂಸ್ಥೆಗಳಲ್ಲಿನ ಬ್ಯಾಕ್‌ಲಾಗ್ ಹುದ್ದೆಗಳ ವಿವರ

| ಕ್ರಮ ಸಂಖ್ಯೆ | ಇಲಾಖೆ/ನಿಗಮ/ ಮಂಡಳಿ/ವಿಶ್ವವಿದ್ಯಾಲಯ/ಸಹಕಾರ ಸಂಸ್ಥೆಗಳು ಇತ್ಯಾದಿ | ಭರ್ತಿ ಮಾಡಲು ಬಾಕಿ ಇರುವ ಹುದ್ದೆಗಳ ಸಂಖ್ಯೆ (2001 ರಲ್ಲಿ ಗುರುತಿಸಿರುವ ಹುದ್ದೆಗಳ ಸಂಖ್ಯೆ) | | | ಭರ್ತಿ ಮಾಡಲು ಬಾಕಿ ಇರುವ ಹುದ್ದೆಗಳ ಸಂಖ್ಯೆ (2001 ರ ನಂತರ ಗುರುತಿಸಿರುವ ಹುದ್ದೆಗಳ ಸಂಖ್ಯೆ) | | | ಒಟ್ಟು ಹುದ್ದೆಗಳ ಸಂಖ್ಯೆ |
|---|---|---|---|---|---|---|---|---|
| | | ಪ.ಜಾ | ಪ.ಪಂ | ಒಟ್ಟು | ಪ.ಜಾ | ಪ.ಪಂ | ಒಟ್ಟು | |
| 1 | 2 | 3 | 4 | 5 | 6 | 7 | 8 | 9 |
| 1 | ಉನ್ನತ ಶಿಕ್ಷಣ ಇಲಾಖೆ | 341 | 335 | 676 | 77 | 72 | 149 | 825 |
| 2 | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ | 287 | 145 | 432 | 0 | 0 | 0 | 432 |
| 3 | ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ | 269 | 75 | 344 | 0 | 0 | 0 | 344 |
| 4 | ಲೋಕೋಪಯೋಗಿ ಮತ್ತು ಜಲಸಂಪನ್ಮೂಲ ಇಲಾಖೆ | 182 | 1 | 183 | 0 | 0 | 0 | 183 |
| 5 | ಸಾರಿಗೆ ಇಲಾಖೆ | 1 | 0 | 1 | 151 | 26 | 177 | 178 |
| 6 | ಸಹಕಾರ ಇಲಾಖೆ | 76 | 18 | 94 | 26 | 10 | 36 | 130 |
| 7 | ರೇಷ್ಮೆ ಇಲಾಖೆ | 92 | 26 | 118 | 0 | 0 | 0 | 118 |
| 8 | ನಗರಾಭಿವೃದ್ಧಿ ಇಲಾಖೆ | 14 | 12 | 26 | 6 | 2 | 8 | 34 |
| 9 | ತೋಟಗಾರಿಕೆ ಇಲಾಖೆ | 7 | 5 | 12 | 16 | 6 | 22 | 34 |
| 10 | ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆ | 21 | 7 | 28 | 0 | 0 | 0 | 28 |
| 11 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | 5 | 1 | 6 | 9 | 12 | 21 | 27 |
| 12 | ಇಂಧನ ಇಲಾಖೆ | 9 | 16 | 25 | 0 | 0 | 0 | 25 |
| 13 | ಅರಣ್ಯ ಇಲಾಖೆ | 0 | 0 | 0 | 19 | 3 | 22 | 22 |
| 14 | ವೈದ್ಯಕೀಯ ಶಿಕ್ಷಣ ಇಲಾಖೆ | 3 | 15 | 18 | 0 | 0 | 0 | 18 |
| 15 | ಕೃಷಿ ಇಲಾಖೆ | 8 | 8 | 16 | 0 | 0 | 0 | 16 |
| 16 | ಕನ್ನಡ ಮತ್ತು ಸಂಸ್ಕೃತಿ ಇಲಾಖೆ | 4 | 2 | 6 | 0 | 1 | 1 | 7 |
| 17 | ಒಳಾಡಳಿತ ಇಲಾಖೆ | 2 | 3 | 5 | 0 | 0 | 0 | 5 |
| 18 | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ | 0 | 0 | 0 | 2 | 0 | 2 | 2 |
| 19 | ಪಶು ಸಂಗೋಪನೆ ಮತ್ತು ಪಶು ವೈದ್ಯಕೀಯ ಸೇವೆಗಳ ಇಲಾಖೆ | 1 | 0 | 1 | 1 | 0 | 1 | 2 |
| 20 | ಕಂದಾಯ ಇಲಾಖೆ | 0 | 1 | 1 | 1 | 0 | 1 | 2 |
| | ಒಟ್ಟು | 1322 | 670 | 1992 | 308 | 132 | 440 | 2432 |